## ಪಾಪ ಪುಣ್ಯ



ವರ್ಷಾರಂಭದಲ್ಲಿ ಕನ್ನಡ ಮೇಷ್ಟ್ರು ಶಿವಶರಣರ ವಚನಗಳನ್ನು ಹೇಳಿಕೊಡಲು ಪ್ರಾರಂಭಿಸಿದರು. ಅವರು ಹೇಳಿಕೊಟ್ಟ ಮೊದಲ ವಚನ–

**ಬಸವನೆಂದರೆ ಪಾಪ ಹೋಗುವುದಯ್ಯ**

**ಪುಣ್ಯ ಬಪ್ಪುದಯ್ಯ...**

ಇದನ್ನೇ ಹತ್ತು ಸಾರಿ ಹೇಳುತ್ತಾ ಬಾಯಿಪಾಠ ಮಾಡಿ ಎನ್ನುತ್ತ ಬೇರೆಕೆಲಸದಲ್ಲಿ ಮಗ್ನರಾದರು. ಸ್ವಲ್ಪ ಹೊತ್ತಿನ ನಂತರ ಹಿಂದಿನ ಬೆಂಚಿನಲ್ಲಿ ಕೂತು ಗಲಾಟೆ ಮಾಡುತ್ತಿದ್ದ ಯೋಗೇಶನನ್ನು ಎಬ್ಬಿಸಿ ತಾವು ಹೇಳಿಕೊಟ್ಟ ವಚನವನ್ನು ಹೇಳಲು ಕೇಳಿದರು. ಆತ,

**ಬಸವನೆಂದರೆ ಪಾಪ...**

**ಹೋಗುವುದಯ್ಯ... ಪುಣ್ಯ...**

**ಬಪ್ಪುದಯ್ಯಾ...**

ಎಂದು ಒಂದೊಂದೇ ಸಾಲವನ್ನು ನೆನಪಿಗೆ ತಂದುಕೊಂಡು ಹೇಳಿದ. ಎಲ್ಲರೂ ಗೊಳ್ಳೆಂದು ನಕ್ಕರು. ಅವನು ಹೇಳಿದ್ದರಲ್ಲಿ ತಪ್ಪೇನೂ ಇರಲಿಲ್ಲ. ಆದರೆ ಓದುವಾಗ ಸಾಲುಗಳನ್ನು ಒಡೆದುಕೊಂಡಿದ್ದು ತಪ್ಪಾಗಿತ್ತು. ಅಷ್ಟೆ.

**ರಾಮಕೃಷ್ಣ ಗೋಖಲೆ**

---

## ಡಬಲ್



ಕಲೆ: ಗಣೇಶ ಆಚಾರ್ಯ

ಒಮ್ಮೆ ರಮೇಶನಿಗೆ ತಾನೂ ಚಂದ್ರಲೋಕಕ್ಕೆ ಹೋಗಬೇಕು ಎನ್ನುವ ಮಹದಾಸೆ ಉಂಟಾಯಿತು. ಎದುರಿಗೆ ಸಿಕ್ಕ ಆಟೊ ಚಾಲಕನಿಗೆ ಕೇಳಿದ, 'ಚಂದ್ರಲೋಕಕ್ಕೆ ಬರುತ್ತೀಯೇನಪ್ಪಾ?' ಎಂದು. ಅವನು, 'ಕ್ಷೀನಿ ಸಾರ್! ಆದರೆ 1200 ಕೋಟಿ ಆಗುತ್ತದೆ' ಎಂದ. ಹೌಹಾರಿದ ರಮೇಶ, ಸಾವರಿಸಿಕೊಂಡು, 'ಏನಪ್ಪಾ, ಇಸ್ರೋದವರೇ 600 ಕೋಟಿ ಖರ್ಚುಮಾಡಿದ್ದಾರೆ. ನೀನು ನೋಡಿದರೆ ಅದರ ಡಬಲ್ ಕೇಳುತ್ತಿದ್ದೀಯಲ್ಲ?' ಎಂದು ಕೇಳಿದ. ಅದಕ್ಕೆ ಆಟೊ ಚಾಲಕ, 'ಏನು ಮಾಡೋದು ಸಾರ್! ವಾಪಸ್ಸು ಬರಬೇಕಾದರೆ ಖಾಲಿ ಬರಬೇಕಾಗುತ್ತಲ್ಲ, ಅದಕ್ಕೆ' ಎಂದ.

**ಎಂ.ಕೆ.ಮಂಜುನಾಥ್**